PW 1

(ಇಂದು ದಿನಾಂಕಃ 06-12-2023 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲು –ಆರೋಪಿ ಪರ ಶ್ರೀ ವಿ.ಎ.ಟಿ. ವಕೀಲರಿಂದ**

ಈ ಫಿರ್ಯಾದನ್ನು ದಾಖಲಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿದೆ. ನನಗೆ ಆರೋಪಿಯ ಪರಿಚಯ ಕ್ರಿಕೆಟ್ ಆಟ ಆಡಲು ಬಂದಾಗ ಆಗಿರುತ್ತದೆ ಎಂಬ ವಿಷಯವನ್ನು ನಾನು ನನ್ನ ಫಿರ್ಯಾದಿನಲ್ಲಿ ತಿಳಿಸಿರುವುದಿಲ್ಲ. ಸದರಿ ವಿಷಯವನ್ನು ನಾನು ಫಿರ್ಯಾದು ದಾಖಲು ಮಾಡುವ ಸಂದರ್ಭದಲ್ಲಿ ಫಿರ್ಯಾದಿನಲ್ಲಿ ನಮೂದಿಸಲು ತೊಂದರೆ ಇರಲಿಲ್ಲ. ಆರೋಪಿಯು ನನಗೆ 10 ವರ್ಷಗಳಿಂದ ಪರಿಚಯ ಇದ್ದಾರೆ ಎಂದು ನಿ.ಪಿ. 8 ರಲ್ಲಿ ತಿಳಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಆರೋಪಿಯ ಪರಿಚಯ ಇದೆ ಎಂದು ಮಾತ್ರ ತಿಳಿಸಿರುತ್ತೇನೆ. ಯಾವ ಸಾಲಿನಿಂದ ಆರೋಪಿಯ ಪರಿಚಯ ಎಂದು ನಿ.ಪಿ. 8 ಮತ್ತು 4 ರಲ್ಲಿ ನಮೂದಿಸಿರುವುದಿಲ್ಲ. ಆರೋಪಿಯು ಸಾಮಾನ್ಯ ದಿನಗಳಲ್ಲಿ ಕ್ರಿಕೆಟ್ ಆಟ ಆಡಲು ಬಂದಾಗ ಮಾತನಾಡುತ್ತಿದ್ದರು ಮತ್ತು ಹಣದ ಅವಶ್ಯಕತೆ ಇದ್ದಾಗ ಫೋನ್ ಮೂಲಕ ಮಾತನಾಡುತ್ತಿದ್ದರು. ಆರೋಪಿಯ ಮೊಬೈಲ್ ನಂ. ಅನ್ನು ನನ್ನ ಫಿರ್ಯಾದಿನಲ್ಲಿ ಅಥವಾ ಮುಖ್ಯ ವಿಚಾರಣೆಯಲ್ಲಿ ನಮೂದು ಮಾಡಿರುವುದಿಲ್ಲ.

ನನ್ನ ಮತ್ತು ಆರೋಪಿಯ ನಡುವೆ ಹಣದ ವ್ಯವಹಾರವು ಕುಮಟಾದಲ್ಲಿ ನಡೆದಿರುತ್ತದೆ. ಸಾಮಾನ್ಯವಾಗಿ 50 ಸಾವಿರ ರೂ. ಕ್ಕಿಂತ ಮೇಲ್ಪಟ್ಟ ಹಣದ ವ್ಯವಹಾರದಲ್ಲಿ ಇಂಡಿಯನ್ ಕಾಂಟ್ರೆಕ್ಟ ಆ್ಯಕ್ಟ ಪ್ರಕಾರ ಕರಾರು ಮಾಡಬೇಕಾಗುತ್ತದೆ ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಪರಿಚಯ ಇದ್ದ ವ್ಯಕ್ತಿಯ ಜೊತೆ ಹಣದ ವ್ಯವಹಾರವನ್ನು ನಡೆಸುತ್ತಾರೆ ಎಂದರೆ ಸರಿ. ನಾನು ಆರೋಪಿಗೆ ಹಣವನ್ನು ಆರೋಪಿಯ ಅಕೌಂಟ್ ಗೆ ಹಾಕಿರುತ್ತೇನೆ. ನಾನು ನಿ.ಪಿ. 8 ಮತ್ತು 4 ರಲ್ಲಿ ಆರೋಪಿಯ ಅಕೌಂಟ್ ಗೆ ಹಣವನ್ನು ಹಾಕಿರುವ

ಬಗ್ಗೆ ನಮೂದು ಮಾಡಿರುತ್ತೇನೆ. ಸಾಕ್ಷಿಯು ನಿ.ಪಿ. 4 ನ್ನು ನೋಡಿ ಆರೋಪಿಯ ಅಕೌಂಟ್ ಗೆ ಹಣ ಹಾಕಿರುವ ಬಗ್ಗೆ ನಮೂದು ಇಲ್ಲ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ಸೇರಿದ ಶಾಂತಿಕಾ ವೆಂಚರ್ಸ ಅಕೌಂಟ್ ಗೆ ಹಣವನ್ನು ಹಾಕಿರುತ್ತೇನೆ. ನಾನು ಶಾಂತಿಕಾ ವೆಂಚರ್ಸ ಫಾರ್ಮ ಹೆಸರಿನ ವಿರುದ್ದ ಫಿರ್ಯಾದನ್ನು ಹಾಕಿರುವುದಿಲ್ಲ. ನಾನು ಶಾಂತಿಕಾ ವೆಂಚರ್ಸ ಅಕೌಂಟ್ ಗೆ ಹಣವನ್ನು ಹಾಕಿರುತ್ತೇನೆ ಹೊರತು ಆರೋಪಿಗೆ ಸೇರಿದ ಬ್ಯಾಂಕ್ ಖಾತೆಗೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನನಾು ಆರೋಪಿಯ ಅಕೌಂಟ್ ಗೆ ಹಣ ಜಮಾ ಮಾಡಿರುವ ಬಗ್ಗೆ ನಿ.ಪಿ. 7 ನ್ನು ಹೊರತುಪಡಿಸಿ ಬೇರೆ ದಾಖಲೆಗಳು ಇರುವುದಿಲ್ಲ.

ಯಾವುದೇ ಲಾಭ ಮತ್ತು ನಷ್ಟವನ್ನು ವಾರ್ಷಿಕ ಆದಾಯ ತೆರಿಗೆ ಮರುಪಾವತಿಯ ಬ್ಯಾಲೆನ್ಸ ಶೀಟ್ ನಲ್ಲಿ ನಮೂದು ಮಾಡಲಾಗುತ್ತದೆ ಎಂದರೆ ಸರಿ. ನಾನು ಹಾಗೇ ನಮೂದು ಮಾಡಿದ ಬ್ಯಾಲೆನ್ಸ ಶೇಟ್ ನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಡಿಪಸಿರುವುದಿಲ್ಲ. ಆರೋಪಿಗೆ ವರ್ಷಕ್ಕೆ 2 ಕೋಟಿ ರೂ. ಆದಾಯ ಬರುತ್ತದೆ ಎಂದರೆ ಸರಿ. ಆರೋಪಿಗೆ ಒಳ್ಳೆಯ ಅದಾಯ ಇರುವುದರಿಂದ ನನ್ನ ಬಳಿ ಹಣ ಕೇಳುವ ಅಗತ್ಯ ಉದ್ಭವ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಹಣ ನೀಡಿದ ಒಂದು ವರ್ಷದಲ್ಲಿ ಹಣ ಮರುಪಾವತಿ ಮಾಡುವಂತೆ ಕೇಳಿಕೊಂಡಿರುತ್ತೇನೆ. ಆಗ ಆರೋಪಿಯು ಒಂದು ಚೆಕ್ ನ ಮೇಲೆ ಸಹಿ ಹಾಕಿ ಮತ್ತು ಮೊತ್ತವನ್ನು ನಮೂದು ಮಾಡಿ ನನಗೆ ನೀಡಿರುತ್ತಾರೆ. ನಿ.ಪಿ. 1 ರಲ್ಲಿರುವ ಸಹಿಯು ಆರೋಪಿಗೆ ಸೇರಿದ್ದಲ್ಲ ಎಂದರೆ ಸಾಕ್ಷಿಯು ಆರೋಪಿಯು ಸದರಿ ಚೆಕ್ ನಲ್ಲಿ ಮೊದಲೇ ಸಹಿ, ಮೊತ್ತವನ್ನು ಮತ್ತು ನನ್ನ ಹೆಸರನ್ನು ಬರೆದು ನನಗೆ ನೀಡಿರುತ್ತಾರೆ. ನಿ.ಪಿ. 1 ನ್ನು ಸಾಕ್ಷಿಯು ನೋಡಿದ್ದು, ಅದರಲ್ಲಿರುವ ಅಕ್ಷರದಲ್ಲಿ ಬರೆದಿರುವ ಹೆಸರಿಗೆ ಮತ್ತು ಅಂಕೆಯಲ್ಲಿ ಬರೆದ ಬರವಣಿಗೆಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿ.ಪಿ. 1 ರಲ್ಲಿ ಬರೆದಿರುವ ಅರುಣ ಹನುಮಂತ ನಾಯ್ಕು, ಅಕ್ಷರದಲ್ಲಿ ಬರೆದಿರುವ Ten

lakhs only ಮತ್ತು ಅಂಕೆಯಲ್ಲಿ ಬರೆದಿರುವ 10,00,000/- ಎಂದು ಬರೆದಿರುವುದನ್ನು ಆರೋಪಿ ಕಡೆಯವರು ಎಕ್ಸಪರ್ಟ ಓಪಿನಿಯನ್ ಗೆ ಕಳುಹಿಸಲು ತೊಂದರೆ ಇರುವುದಿಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾ.ದಂ. ಕುಮಟಾ